# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1041 |
| ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ: | : | 22.12.2021 |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಲೋಕೋಪಯೋಗಿ ಇಲಾಖೆಯಲ್ಲಿ ವಿದ್ಯುತ್ ವಿಭಾಗದಲ್ಲಿರುವ ವಿವಿಧ ಹಂತದ ಅಭಿಯಂತರರ ಹುದ್ದೆಗಳ ಅಂಕಿ ಅಂಶಗಳೆಷ್ಟು? (ವಿವರ ಒದಗಿಸುವುದು). | ಲೋಕೋಪಯೋಗಿ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ವಿದ್ಯುತ್ ವಿಭಾಗದಲ್ಲಿರುವ ವಿವಿಧ ಹಂತದ ಅಭಿಯಂತರರ ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ. |

| ಕ್ರ.ಸಂ | ಹುದ್ದೆಯ ಹೆಸರು | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| | | | ಲೋ.ಇ | ನಿಯೋಜನೆ | |
| 1 | ಕಾರ್ಯಪಾಲಕ ಅಭಿಯಂತರರು (ವಿದ್ಯುತ್) | 3 | 3 | – | – |
| 2 | ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ-1) / ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ-2) | 10 | 10 | – | – |
| 3 | ಸಹಾಯಕ ಅಭಿಯಂತರರು (ವಿದ್ಯುತ್ ವಿಭಾಗ-1) | 18 | 2 | 7 | 9 |
| | ಸಹಾಯಕ ಅಭಿಯಂತರರು (ವಿದ್ಯುತ್ ವಿಭಾಗ-2) | 5 | 5 | – | – |
| 4 | ಕಿರಿಯ ಅಭಿಯಂತರರು (ವಿದ್ಯುತ್) | 20 | 4 | 1 | 15 |
| | ಒಟ್ಟು | 56 | 24 | 8 | 24 |

<table>
<tr>
<td>ಆ</td>
<td>ಸದರಿ ಹುದ್ದೆಗಳಿಗೆ ಇಂಧನ ಇಲಾಖೆಯಿಂದ ಡೆಪ್ಯೂಟೇಷನ್ ಆಧಾರದ ಮೇಲೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಅಂಕಿ ಅಂಶಗಳೆಷ್ಟು?<br>(ವಿವರ ಒದಗಿಸುವುದು).</td>
<td>ಲೋಕೋಪಯೋಗಿ ಇಲಾಖೆಯಲ್ಲಿನ ವಿದ್ಯುತ್ ಹುದ್ದೆಗಳಿಗೆ ಈ ಕೆಳಕಂಡ ವೃಂದದ ಅಭಿಯಂತರರುಗಳು ಇಂಧನ ಇಲಾಖೆಯಿಂದ ನಿಯೋಜನೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುತ್ತಾರೆ.
<table>
<tr><th>ಕ್ರ.ಸಂ.</th><th>ಹುದ್ದೆಯ ಹೆಸರು</th><th>ನಿಯೋಜನೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ</th></tr>
<tr><td>1</td><td>ಸಹಾಯಕ ಅಭಿಯಂತರರು (ವಿದ್ಯುತ್ ವಿಭಾಗ-1)</td><td>7</td></tr>
<tr><td>2</td><td>ಕಿರಿಯ ಅಭಿಯಂತರರು (ವಿದ್ಯುತ್)<br>(ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ನಿಗಮದಿಂದ ನಿಯೋಜನೆ)</td><td>1</td></tr>
<tr><td colspan="2">ಒಟ್ಟು</td><td>8</td></tr>
</table>
</td>
</tr>
<tr>
<td>ಇ</td>
<td>ಲೋಕೋಪಯೋಗಿ ಇಲಾಖೆ ಮತ್ತು ಇಂಧನ ಇಲಾಖೆಯ ಅಭಿಯಂತರರಿಗೆ ನೀಡಲಾಗುತ್ತಿರುವ ವೇತನವೆಷ್ಟು?<br>(ವಿವರ ಒದಗಿಸುವುದು).</td>
<td>ಲೋಕೋಪಯೋಗಿ ಇಲಾಖೆಯಲ್ಲಿನ ವಿದ್ಯುತ್ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಭಿಯಂತರರುಗಳಿಗೆ ಲೋಕೋಪಯೋಗಿ ಇಲಾಖೆಯಿಂದ ಮತ್ತು ಇಂಧನ ಇಲಾಖೆಯ ಅಭಿಯಂತರರಿಗೆ ನೀಡಲಾಗುತ್ತಿರುವ ವೇತನದ ವಿವರದ ಪಟ್ಟಿಯನ್ನು ಅನುಬಂಧ-1 ರಲ್ಲಿ ಇರಿಸಿದೆ.</td>
</tr>
<tr>
<td>ಈ</td>
<td>ಲೋಕೋಪಯೋಗಿ ಇಲಾಖೆಯು ಯಾವ ಕಾರಣಗಳಿಗೆ ಸದರಿ ಹೆಚ್ಚುವರಿ ವೇತನದ ಹೊರೆ ಹೊರುತ್ತಿದೆ?</td>
<td>ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರ್ (ವಿಭಾಗ-1)(ವಿದ್ಯುತ್) ಮತ್ತು ಕಿರಿಯ ಇಂಜಿನಿಯರ್(ವಿದ್ಯುತ್) ಹುದ್ದೆಗಳನ್ನು ಈ ಹಿಂದೆ ಇದ್ದ 1989ರ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಸಂಪೂರ್ಣವಾಗಿ ಇಂಧನ ಇಲಾಖೆಯ ವ್ಯಾಪ್ತಿಗೆ ಒಳಪಡುವ ಕೆಪಿಟಿಸಿಎಲ್ ಹಾಗೂ ಕೆಪಿಸಿಎಲ್ ನಿಗಮಗಳಿಂದ ನಿಯೋಜನೆ ಮೇರೆಗೆ ಭರ್ತಿ ಮಾಡಿಕೊಳ್ಳಲು ಅವಕಾಶವಿದ್ದು, ಸದರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶವಿರಲಿಲ್ಲ.<br><br>ಲೋಕೋಪಯೋಗಿ ಇಲಾಖೆಯ 2018ರ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಾವಳಿಯನುಸಾರ ವಿದ್ಯುತ್ ವಿಭಾಗದ ಸಹಾಯಕ ಇಂಜಿನಿಯರ್(ವಿದ್ಯುತ್) ಮತ್ತು ಕಿರಿಯ ಇಂಜಿನಿಯರ್(ವಿದ್ಯುತ್) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸದರಿ ಹುದ್ದೆಗಳು ಖಾಲಿ ಇದ್ದಲ್ಲಿ ಇಂಧನ ಇಲಾಖೆಯಿಂದ ತಾತ್ಕಾಲಿಕವಾಗಿ ನಿಯೋಜನೆ ಮೇಲೆ ಸೇವೆಯನ್ನು ಪಡೆಯಲು ಅವಕಾಶವನ್ನು ಸಹ ಕಲ್ಪಿಸಲಾಗಿದೆ. 2018ರ ನಿಯಮಾವಳಿಯನುಸಾರ ನೇರ ನೇಮಕಾತಿ ಹುದ್ದೆಗಳನ್ನು ಲೋಕೋಪಯೋಗಿ ಇಲಾಖೆಯ ಮುಖಾಂತರವೇ ಭರ್ತಿ ಮಾಡಿಕೊಳ್ಳಲು ಉದ್ದೇಶಿಸಿ ಹೆಚ್ಚುವರಿ ಆರ್ಥಿಕ ಹೊರೆಯನ್ನು ತಪ್ಪಿಸಲು ಈಗಾಗಲೇ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಸಹಮತಿ ಪಡೆಯಲು ಕ್ರಮವಹಿಸಿದೆ.</td>
</tr>
</table>

| | | |
|---|---|---|
| ಉ | ಲೋಕೋಪಯೋಗಿ ಇಲಾಖೆಯಲ್ಲಿ ಅಗತ್ಯವಿರುವ ವಿದ್ಯುತ್ ಅಭಿಯಂತರರನ್ನು ನೇಮಿಸಿಕೊಳ್ಳಲು ನಡೆಸುವ ಪ್ರಕ್ರಿಯೆಗಳೇನು? (ವಿವರ ನೀಡುವುದು) | 2018ರ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ಸಹಾಯಕ ಇಂಜಿನಿಯರ್ (ವಿದ್ಯುತ್) ಮತ್ತು ಕಿರಿಯ ಇಂಜಿನಿಯರ್ (ವಿದ್ಯುತ್) ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿಗೆ ಪ್ರಸ್ತಾವನೆ ಸಲ್ಲಿಸಿದೆ. |

ಲೋಇ 49 ಸೇಸಕಿ 2021

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು

# <u>ಅನುಬಂಧ-1</u>

## ಪ್ರಶ್ನೆ ಸಂಖ್ಯೆ "ಇ" ಗೆ ಸಂಬಂಧಿಸಿದಂತೆ ವಿವರದ ಪಟ್ಟಿ

| ಕ್ರಮ ಸಂಖ್ಯೆ | ಹುದ್ದೆ | ಲೋಕೋಪಯೋಗಿ ಇಲಾಖೆ ವೇತನ ಶ್ರೇಣಿ | ಲೋಕೋಪಯೋಗಿ ಇಲಾಖೆಯ ವೇತನದ ವಿವರ | ಕೆ.ಪಿ.ಟಿ.ಸಿ.ಎಲ್ ವೇತನ ಶ್ರೇಣಿ | ಕೆ.ಪಿ.ಟಿ.ಸಿ.ಎಲ್ ವೇತನದ ವಿವರ |
|---|---|---|---|---|---|
| 1. | ಸಹಾಯಕ ಕಾರ್ಯಪಾಲಕ ಅಭಿಯಂತರರು | 52650–1250–53900–1450–62600–1650–72500–1900–83900–2200–97100 | Pay: 52650.00<br>DA: 5923.00<br>HRA: 12636.00<br>CCA: 600.00<br>Total: 71809.00 | 46080–1390–51640–1560–56320–1700–63120–1900–68820–2050–7900 | Pay: 46080.00<br>Dearness Pay: 20851.00<br>DA: 7529.00<br>HRA: 16063.00<br>CCA: 600.00<br>Deputation Allowance: 200.00<br>Total: 91323.00 |
| 2. | ಸಹಾಯಕ ಅಭಿಯಂತರರು | 43100–1100–46400–1250–53900–1450–62600–1650–72500–1900–83900 | Pay: 43100.00<br>DA: 4848.00<br>HRA: 10344.00<br>CCA: 600.00<br>Total: 58892.00 | 41130–1140–42270–1270–46080–1390–51640–1560–56320–1700–63120–1900–68820–2050–72920 | Pay: 41130.00<br>Dearness Pay: 18611.00<br>DA: 6720.00<br>HRA: 14337.00<br>CCA: 600.00<br>Deputation Allowance: 200.00<br>Total: 81598.00 |
| 3. | ಕಿರಿಯ ಇಂಜಿನಿಯರ್ | 33450–850–36000–950–39800–1100--46400–1250–53900–1450–62600 | Pay: 33450.00<br>DA: 3763.00<br>HRA: 8028.00<br>CCA: 500.00<br>200.00<br>Total: 45941.00 | 26270–810–31130–940–37710–1140–42270–1270–46080–1390–51640–1560–56320–1700–63120–1900–65020 | Pay: 26270.00<br>Dearness Pay: 11887.00<br>DA: 4292.00<br>HRA: 9157.00<br>CCA: 500.00<br>Deputation Allowance: 200.00<br>Total: 52306.00 |